# ಫುಲ್ ಮಾರ್ಕ್ಸ್ ಹೊರೆಯಾಗಬಲ್ಲುದೆ?

ಭಾಷಾ ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಪಡೆಯುವುದು ಅಥವಾ ನೀಡುವುದು ನಮ್ಮ ಶಿಕ್ಷಣ ಕ್ರಮದ ಭಾವಕೋಶ ಆರ್ದ್ರತೆ ಕಳೆದುಕೊಳ್ಳುತ್ತಿರುವುದರ ಸೂಚನೆಯೂ ಇರಬಹುದು.

■ ಸ್ವಯಂಪ್ರಭಾ



ಹತ್ತನೇ ತರಗತಿಯ ಇಂಗ್ಲಿಷ್ ಪೀರಿಯೆಡ್. ವಿದ್ಯಾರ್ಥಿಯೊಬ್ಬ ಬರೆದ ಇಂಗ್ಲಿಷ್ ಪ್ರಬಂಧವೊಂದನ್ನು ಓದುವಂತೆ ಟೀಚರ್ ಸೂಚಿಸಿದ್ದರು. ಪ್ರಬಂಧವನ್ನು ಆರಂಭಿಸಿದ ಬಗೆ, ಅದನ್ನು ಮುಂದುವರೆಸುತ್ತ ವಿಷಯ ಜೋಡಣೆಗೆ ಆಯ್ಕೆ ಮಾಡಿಕೊಂಡ ಇಂಗ್ಲಿಷ್ ಪದಗಳ ಸೊಗಸು, ಭಾಷೆಯ ಬಳಕೆಯಲ್ಲಿ ಆ ಹುಡುಗನಿಗೆ ಇರುವ ಹಿಡಿತವನ್ನು ಗಮನಿಸಿ ಟೀಚರ್‌ಗೆ ತುಂಬಾ ಖುಷಿಯಾಗಿತ್ತು.

ಭಾಷೆಯ ಕಲಿಕೆ ಎಂದರೆ ಅದು ಗಣಿತ ಮತ್ತು ವಿಜ್ಞಾನದ ಕಲಿಕೆಗಿಂತ ಭಿನ್ನವಾದುದು. 'ನ್ಯೂಟನ್ನನ ನಿಯಮಗಳನ್ನು ಬರೆಯಿರಿ' ಎಂಬ ಪ್ರಶ್ನೆಯಿದ್ದರೆ, ಅದಕ್ಕೆ ಉತ್ತರಿಸಲು ಹಲವು ವಿಧಾನಗಳಿಲ್ಲ. ಅವೇ ಪದಗಳಲ್ಲಿ ಅದೇ ನಿಯಮವನ್ನು ಹೇಳಬೇಕಷ್ಟೆ. ಆದರೆ ಕನ್ನಡ, ಹಿಂದಿ, ಇಂಗ್ಲಿಷ್, ಸಂಸ್ಕೃತ ಮುಂತಾದ ಭಾಷೆಗಳನ್ನು ಕಲಿಯುವಾಗ, ಪದ ಸಂಪತ್ತಿನ ಶ್ರೀಮಂತಿಕೆ, ವಾಕ್ಯ ರಚನೆಯ ಸೌಂದರ್ಯ, ಉಪಮೆ ಮತ್ತು ರೂಪಕಗಳನ್ನು ಬಳಸುವ ಮೂಲಕ, ಓದುವವರು ವಿಷಯವನ್ನು ಅರ್ಥ ಮಾಡಿಕೊಳ್ಳಲು ನೆರವಾಗುವುದು ಅಥವಾ ಓದುವಿಕೆಯನ್ನು ಸಂಭ್ರಮಿಸುವಂತೆ ಮಾಡುವ ಅವಕಾಶ ಇದ್ದೇ ಇರುತ್ತದೆ. ಹತ್ತನೇ ತರಗತಿಯಲ್ಲಿ ಈ ಎಲ್ಲ ಸಾಧ್ಯತೆಗಳನ್ನು ಖಚಿತವಾಗಿ ವ್ಯಾಖ್ಯಾನಿಸುವುದು ವಿದ್ಯಾರ್ಥಿಯಿಂದ ಸಾಧ್ಯವಾಗದೇ ಇದ್ದರೂ, ದೀರ್ಘವಾದ ಉತ್ತರಗಳನ್ನು ಬರೆಯುವ ಸಂದರ್ಭದಲ್ಲಿ ಈ ಸಾಧ್ಯತೆಗಳನ್ನು ಅವನು ಅಥವಾ ಅವಳು ತನಗೆ ಗೊತ್ತಿಲ್ಲದಂತೆಯೇ ಪ್ರಯತ್ನಿಸಿರುತ್ತಾರೆ.

ಹಿಂದೆಲ್ಲ ಪರೀಕ್ಷೆಗಳಲ್ಲಿ, ಭಾಷಾ ವಿಷಯದಲ್ಲಿ ನೂರಕ್ಕೆ ನೂರು ಅಂಕಗಳನ್ನು ಅಧ್ಯಾಪಕರು ಕೊಡುತ್ತಿರಲಿಲ್ಲ. ಭಾಷಾ ವಿಷಯವನ್ನು ಕಲಿಯುವ ಉದ್ದೇಶ – ಹಿಂದಿಯೋ, ಇಂಗ್ಲಿಷೋ, ಕನ್ನಡವೋ ಚೆನ್ನಾಗಿ ಮಾತನಾಡಲು, ಬರೆಯಲು ಕಲಿಯುವುದಷ್ಟೇ ಅಲ್ಲ. ಬದುಕನ್ನು ಸೂಕ್ಷ್ಮವಾಗಿ ಗಮನಿಸುವ ಪಾಠ ಅದರಲ್ಲಿ ಅಡಕವಾಗಿದೆ. ಉದಾಹರಣೆಗೆ, ಉಪಮೆಗಳ ವಿಷಯಕ್ಕೆ ಬಂದರೆ, ದೈನಂದಿನ ಜೀವನದಲ್ಲಿ ನೋಡುವ ಎಷ್ಟೋ ವಿಷಯಗಳು ಉಪಮೆಯಾಗಿ ಬರಬಹುದು. ಅಥವಾ ಇತರ ಪಠ್ಯಗಳನ್ನು, ದೊಡ್ಡವರ ಹೇಳಿಕೆಗಳನ್ನು ಉಲ್ಲೇಖಿಸುವುದು, ಗಾದೆಗಳ ಬಳಕೆ, ಪದಗಳ ಆಯ್ಕೆ ಹೀಗೆ ಬರವಣಿಗೆಯನ್ನು ಚಂದಗಾಣಿಸುವ ಸಾಧ್ಯತೆಗಳು ಸಾಕಷ್ಟಿವೆ. ವಾಸ್ತವವಾಗಿ ಈ ಅಪಾರ ಸಾಧ್ಯತೆಗಳನ್ನು ಮಕ್ಕಳಿಗೆ ಪರಿಚಯಿಸುವುದೇ ಭಾಷಾಪಾಠದ ಉದ್ದೇಶವಾಗಿರುತ್ತದೆ. ಸಮಾಜ ವಿಜ್ಞಾನ ಮತ್ತು ಭಾಷಾ ವಿಭಾಗವು ಸಾಮಾಜಿಕ ಸಂರಚನೆಯನ್ನು ತಿಳಿಯಲು ನೆರವಾಗುವ ಕ್ಷೇತ್ರ.

ಸಮಾಜದಲ್ಲಿ ನಾನು ಹೇಳುವುದಷ್ಟೇ ಅಂತಿಮ ಸತ್ಯವಲ್ಲ, ಬದಲಾಗಿ, ನನಗೆ ಅರಿವಿಲ್ಲದ ಮತ್ತೊಂದು ವಿಚಾರ ಇದ್ದೀತು ಎಂಬ ಅರಿವನ್ನು ಸಮಾಜ ವಿಜ್ಞಾನ ಮತ್ತು ಭಾಷಾ ಕಲಿಕೆ ನೀಡುತ್ತದೆ. ಇತಿಹಾಸವನ್ನು ಓದುವ ಮಕ್ಕಳು, ನಮಗಿಂತ ಹಿಂದೆ ಏನೆಲ್ಲಾ ಸಾಹಸಗಾಥೆಗಳು ಆಗಿಹೋಗಿವೆಯಲ್ಲಾ ಎಂಬ ತಿಳಿವಳಿಕೆ ಪಡೆಯುತ್ತಾರೆ. ಭೂಗೋಳವಾಗಲೀ, ಪೌರನೀತಿಯಾಗಲೀ ಅವರಿಗೆ ಅರಿವಿನೊಂದಿಗೆ ವಿನಯವನ್ನೂ ಕಲಿಸುತ್ತದೆ. ಅದೇ ರೀತಿ ನಾವು ಕಂಡ ವಿಚಾರಗಳನ್ನು ಇತರರಿಗೆ ಹೇಳುವುದಕ್ಕೆ ಸಾವಿರಾರು ವಿಧಾನಗಳಿವೆ ಎಂಬುದನ್ನೂ, ಇತರರು ಹೇಳುವ ರೀತಿಯನ್ನು ಅವರ ಮಟ್ಟದಲ್ಲಿಯೇ ನಿಂತು ಸಾಧ್ಯವಾದಷ್ಟೂ ಅರ್ಥಮಾಡಿಕೊಳ್ಳಬೇಕು ಎಂಬುದನ್ನೂ ಇದೇ ಭಾಷಾ ಪಾಠಗಳು ಹೇಳಿಕೊಡುತ್ತವೆ. ಆ ಕಾರಣಕ್ಕೇ ಇರಬೇಕು, ಹಿಂದೆಲ್ಲ ಕನ್ನಡ ಮೇಷ್ಟ್ರು, ಇಂಗ್ಲಿಷ್ ಮೇಷ್ಟ್ರು ಎಂದರೆ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚು. ಅವರು ಬರೀ ಪಠ್ಯದ ಪಾಠವನ್ನು ಮಾಡುತ್ತಿರಲಿಲ್ಲ, ಜಗತ್ತಿನ ವಿವಿಧ ವಿಷಯಗಳ ಬಗ್ಗೆ ಮಾತನಾಡುತ್ತಿದ್ದರು. ಸಾಹಿತ್ಯದ ರುಚಿ, ಕಲೆಯ ರುಚಿಯನ್ನು ವಿದ್ಯಾರ್ಥಿಗಳಿಗೆ ತೋರಿಸಿಕೊಡುತ್ತಿದ್ದರು. ಅವರ ಮಾತುಗಳಿಂದ ಎಷ್ಟೋ ವಿದ್ಯಾರ್ಥಿಗಳು ಸ್ಫೂರ್ತಿ ಪಡೆದು ತಮ್ಮ ಜೀವನದ ಗುರಿಯನ್ನು ನಿಕ್ಕಿ ಮಾಡಿಕೊಳ್ಳುತ್ತಿದ್ದರು. ಆ ಅಧ್ಯಾಪಕರು ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಬರೆದ ಉತ್ತರಕ್ಕೆ ನೂರಕ್ಕೆ ನೂರು ಅಂಕಗಳನ್ನು ಕೊಟ್ಟವರೇ ಅಲ್ಲ. ತಮ್ಮ ವಿದ್ಯಾರ್ಥಿಗಳಲ್ಲಿ ಸಹಿಷ್ಣುತೆಯನ್ನು ಪೋಷಿಸಿದವರು.

ಇತ್ತೀಚೆಗೆ ಪ್ರಕಟವಾದ ಎಸ್ಸೆಸ್ಸೆಲ್ಸಿ ಫಲಿತಾಂಶದ ಸಂದರ್ಭದಲ್ಲಿ ನೂರಕ್ಕೆ ನೂರು ಅಂಕ ಪಡೆದ ವಿದ್ಯಾರ್ಥಿಗಳ ಜ್ಞಾನದ ಕುರಿತು ಸಾಮಾಜಿಕ ಜಾಲತಾಣದಲ್ಲಿ ಬಹಳವೇ ಚರ್ಚೆಗಳು ನಡೆದವು. ಅಂಕಗಳನ್ನು ಕೊಡುವುದರಲ್ಲೇನು ತಪ್ಪಿದೆ ಎಂಬ ಪ್ರಶ್ನೆಯನ್ನು ಅನೇಕ ಹಿರಿಯರು ಕೇಳಿದರು.

ಅಂಕಗಳನ್ನು ಕೊಡುವುದು ಖಂಡಿತಾ ತಪ್ಪಲ್ಲ. ತನ್ನ ಗ್ರಹಿಕೆಯನ್ನು, ತನ್ನ ಸಂವಹನ ಕೌಶಲವನ್ನು ಮೀರಿದ ಮತ್ತೊಂದು ವಿಚಾರ ಈ ಲೋಕದಲ್ಲಿ ಇದೆ ಎಂಬ ವಿನಯವನ್ನು ವಿದ್ಯಾರ್ಥಿಗಳಿಗೆ ಕಲಿಸುವುದು ಮುಖ್ಯ ಎನ್ನುವುದಷ್ಟೇ ಆಶಯ. ಈ ಆಶಯ ಅಂಕಗಳು ಹೆಚ್ಚಾಗುವುದರಿಂದ ಸಾಧ್ಯವಾಗುವಂತಹದ್ದಲ್ಲ. ಹಾಗಿದ್ದರೆ ಕಡಿಮೆ ಅಂಕಗಳನ್ನು ಕೊಟ್ಟರೆ ಈ ಆಶಯ ಸಾಕಾರವಾಗುತ್ತದೆಯೇ ಎಂದೂ ಕೇಳಬಹುದು. ತಂತ್ರಜ್ಞಾನದ ಯುಗದಲ್ಲಿ ಇಂದಿನ ವಿದ್ಯಾರ್ಥಿಗಳೆಂದರೆ ಇಂದಿನ ಪ್ರಜೆಗಳೇ ಆಗಿದ್ದಾರೆ. ಹಾಗಾಗಿ ಶಿಕ್ಷಕರು ಅವರಿಗೆ ತಿಳಿಹೇಳುವ ವಿಧಾನಗಳನ್ನೂ ಅಪ್‌ಡೇಟ್ ಮಾಡಿಕೊಳ್ಳಬೇಕು. ಅಂಕ ನೀಡುವಿಕೆಯ ಕ್ರಮ ಒಂದು ಭಾಗವಷ್ಟೇ ಎನ್ನಬಹುದು.

'ನೂರಿಪ್ಪತ್ತೈದು ಅಂಕ ತೆಗೆದಿದ್ದಿ ಮಾರಾಯ. ಒಂದು ಪತ್ರ ಬರೆಯಲು ಬರುವುದಿಲ್ವ?' ಎಂಬ ಹಂಗಿಸುವಿಕೆಗೆ ಒಳಗಾಗದೆ, ತಪ್ಪುಗಳನ್ನು ಮಾಡುತ್ತ, ಇನ್ನಷ್ಟು ಬೆಳೆಯುವ ಅವಕಾಶವಾ ವಿದ್ಯಾರ್ಥಿಗೆ ಇರಬೇಕಲ್ಲವೇ? ಫುಲ್ ಮಾರ್ಕ್ಸ್ ಕೆಲವೊಮ್ಮೆ ವಿದ್ಯಾರ್ಥಿಗೆ ಹೊರೆಯೂ ಹೌದು. ■